ನಾನು ಒಂದು ವಿಷಯವನ್ನು ಹೇಳುತ್ತೇನೆ. ನನ್ನನ್ನು ನಮ್ಮ ಪಕ್ಷದವರೇ ಒಮ್ಮತದಿಂದ ಆರಿಸಿದ್ದರು. ಡಿಲ್ಲಿಯಲ್ಲಿದ್ದವರು ನನ್ನನ್ನು ಆರಿಸಿ ನೇಮಕ ಮಾಡಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ :-ಎಲ್ಲಾರಿಗೂ ಆಯಾಯ ಪಕ್ಷದವರೇ ಆರಿಸಿ ಕಳಿಸುವುದು. ಹಾಗಿದ್ದಮೇಲೆ ಈ ರೀತಿಯಾದ ವ್ಯಾಖ್ಯಾನವೇಕೆಬೇಕು? ಮೆಂಬರ್ ಆಗದೇ ಇರುವವರೇ ಆರಿಸಿ ಬರಬೇಕಾದರೆ ಇನ್ನು ಮೆಂಬರ್ ಆಗಿರುವವರನ್ನು ಆರಿಸುವುದರಲ್ಲಿ ನಿಮ್ಮದೇನು ರೀಆಕ್ಷನ್ ಬೇಕು?

ವಿಷಯ : - ವಿದ್ಯುತ್ ದರಗಳ ಪರಿಷ್ಕರಣೆ ಬಗ್ಗೆ.

ಶ್ರೀ ಆರ್.ವಿ. ದೇಶಪಾಂಡೆ(ವಿರೋಧ ಪಕ್ಷದ ನಾಯಕರು) : - ಅಧ್ಯಕ್ಷರೇ, ನಿನ್ನೆ ಮಾನ್ಯ ಮುಖ್ಯಮಂತ್ರಿಗಳ ಮತ್ತು ಉಪಮುಖ್ಯಮಂತ್ರಿಗಳ ಗಮನಕ್ಕೆ ಕೆ.ಇ.ಬಿನವರು ವಿದ್ಯುತ್‌ನ ಬೆಲೆಯನ್ನು ಹೆಚ್ಚು ಮಾಡಿರುವ ಬಗ್ಗೆ ಈ ಶಾಸನ ಸಭೆಯಲ್ಲಿ ಪ್ರಸ್ತಾಪ ಮಾಡಿತಂದಿದ್ದೆ. ಆದಕ್ಕೆ ಅವರು ಇಂದು ಸ್ಟೇಟ್‌ಮೆಂಟನ್ನು ಮಾಡುತ್ತೇನೆಂದು ಹೇಳಿದ್ದರು. ಇವತ್ತು ಅವರು ತಯಾರಿದ್ದರೆ ಹೇಳಿಕೆ ನೀಡಲಿ.

ಶ್ರೀ ಎಸ್.ಎಂ. ಕೃಷ್ಣ(ವಿದ್ಯುತ್ ಸಚಿವರು ಮತ್ತು ಉಪಮುಖ್ಯಮಂತ್ರಿಯವರು) : - ಮಾನ್ಯ ಸದಸ್ಯರುಗಳಿಗೆ ತಿಳಿಸಿರುವಂತೆ ರಾಜ್ಯ ಸರ್ಕಾರವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿವಿಧ ವರ್ಗಗಳ ಬಳಕೆದಾರರಿಗೆ ದಿನಾಂಕ 1-8-1993ರಿಂದ ವಿದ್ಯುತ್ ದರಗಳನ್ನು ಪರಿಷ್ಕರಿಸಲು ಅನುಮತಿ ನೀಡಿತ್ತು. ವಿದ್ಯುತ್ (ಸರಬರಾಜು) ಕಾಯ್ದೆ 1948ರ ಪ್ರಕಾರ ಶಾಸನ ರೂಪದಲ್ಲಿ ನಿಗದಿ ಪಡಿಸಿರುವ ಕನಿಷ್ಠ ಶೇಕಡ 3ರಷ್ಟು ರಿಟರ್ನ್‌ನನ್ನು ತನ್ನ ಸ್ಥಿರಾಸ್ತಿಗಳ ಮೇಲೆ ಮಂಡಳಿಯು ಪಡೆಯಲು ಸಾಧ್ಯವಾಗುವಂತೆ ಈ ರೀತಿಯಾಗಿ ಅನುಮತಿಯನ್ನು ನೀಡಲಾಗಿತ್ತು. ಈ ವಿದ್ಯುತ್ ಪರಿಷ್ಕರಣೆಯನ್ನು ಜಾರಿಗೊಳಿಸುವಾಗ ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಗಳಿಗೆ ಮತ್ತು ಕೃಷಿ ಕ್ಷೇತ್ರಗಳಿಗೆ ಹೊರೆಯಾಗದಂತೆ ನೋಡಿಕೊಳ್ಳಲಾಗಿತ್ತು. ಈ ಪ್ರಕಾರವಾಗಿ ಭಾಗ್ಯಜ್ಯೋತಿ, ಕುಟೀರಜ್ಯೋತಿ ಮತ್ತು ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ದರಗಳನ್ನು ವಿದ್ಯುತ್ ದರಗಳ ಪರಿಷ್ಕರಣೆಯ ಸಮಯದಲ್ಲಿ ಹೆಚ್ಚಿಸಿಲ್ಲ. ಅದೇ ಪ್ರಕಾರ ಬೀದಿ ದೀಪಗಳಿಗೂ ಸಹಾ ವಿದ್ಯುತ್ ದರಗಳ ಹೆಚ್ಚಳದಿಂದ ವಿನಾಯ್ತಿ ನೀಡಲಾಗಿತ್ತು.

ವಿದ್ಯುತ್ ದರಗಳ ಪರಿಷ್ಕರಣೆಯಲ್ಲಿ ಗೃಹ ದೀಪದ ಬಳಕೆದಾರರು ಮತ್ತು ಸರ್ವ ವಿದ್ಯುತ್ ಗೃಹ(ಎ.ಇ.ಹೆಚ್) ಬಳಕೆದಾರರಿಗೂ ವಿದ್ಯುತ್ ದರಗಳನ್ನು 1-8-1993ರಿಂದ ಪರಿಷ್ಕರಿಸಲಾಗಿತ್ತು. ಗೃಹ ದೀಪದ ಬಳಕೆದಾರರಿಗೆ 50 ಯೂನಿಟ್ಟುಗಳವರೆಗೆ ವಿದ್ಯುತ್ ದರವೆನ್ನು ಪ್ರತಿ ಯೂನಿಟ್ಟಿಗೆ 55 ಪೈಸೆಯಿಂದ 65 ಪೈಸೆಗೂ, 50 ಯೂನಿಟ್ಟಿನಿಂದ 100 ಯೂನಿಟ್ಟುಗಳವರೆಗೆ ಪ್ರತಿ ಯೂನಿಟ್ಟಿಗೆ 65 ಪೈಸೆಯಿಂದ 80 ಪೈಸೆಗೂ ಮತ್ತು 100 ಯೂನಿಟ್ಟುಗಳು ಮೀರಿದ ಬಳಕೆಗೆ ಪ್ರತಿ ಯೂನಿಟ್ಟಿಗೆ 75 ಪೈಸೆಯಿಂದ ರೂ 1ಕ್ಕೆ ಹೆಚ್ಚಳಗೊಳಿಸಲಾಗಿತ್ತು. ಸರ್ವ ವಿದ್ಯುತ್‌ಗೃಹ (ಎ.ಇ.ಹೆಚ್) ಬಳಕೆದಾರರ ಬಗ್ಗೆ ಈ ಮುಂಚೆ ಇದ್ದ ವಿದ್ಯುತ್ ದರಗಳು - 200 ಯುನಿಟ್ಟುಗಳವರೆಗೆ ಪ್ರತಿ ಯೂನಿಟ್ಟಿಗೆ ರೂ. 1,201ರಿಂದ 400 ಯೂನಿಟ್ಟುಗಳವರೆಗೆ ಪ್ರತೀ ಯೂನಿಟ್ಟಿಗೆ ರೂ 1.50 ಮತ್ತು 400 ಯೂನಿಟ್ಟಿಗೂ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್ ರೂ 2 ಈ ದರಗಳನ್ನು ಅನುಕ್ರಮವಾಗಿ ಪ್ರತೀ ಯೂನಿಟ್ಟಿಗೆ ರೂ. 1.25, ಪ್ರತೀ ಯೂನಿಟ್ಟಿಗೆ ರೂ. 2 ಮತ್ತು ಪ್ರತೀ ಯೂನಿಟ್ಟಿಗೆ ರೂ. 2.50 ಗಳಿಗೆ ಹೆಚ್ಚಿಸಲಾಗಿತ್ತು.

ಸರ್ಕಾರವು ಎರಡೂ ಸದನಗಳ ಮಾನ್ಯ ಶಾಸಕರುಗಳು ಸದನಗಳ ಒಳಗೆ ಮತ್ತು ಹೊರಗೆ ನೀಡಿರುವ ಅಮೂಲ್ಯ ಸಲಹೆಗಳನ್ನು ಪರಿಗಣಿಸಿ ಮತ್ತು ವಿದ್ಯುತ್ ಬಳಕೆದಾರರು ಮಾಡಿರುವ

ಮನವಿಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಮತ್ತು ಸಮಾಜದ ಬಡ ಹಾಗೂ ಮಧ್ಯಮ ವರ್ಗದ ಜನತೆಗೆ ಅನುಕೂಲ ಮಾಡಿಕೊಡುವ ಸಲುವಾಗಿ ಗೃಹ ದೀಪದ ಬಳಕೆದಾರರಿಗೆ ವಿಧಿಸಲಾಗಿದ್ದ ಹೆಚ್ಚುವರಿ ವಿದ್ಯುತ್ ದರಗಳನ್ನು ಪೂರ್ಣ ರೀತಿಯಲ್ಲಿ ಹಿಂತೆಗೆದುಕೊಳ್ಳಲು ನಿರ್ಧರಿಸಿದೆ. ಇದರಿಂದ ಸಮಾಜದ ಬಡ ವರ್ಗಕ್ಕೆ ಸೇರುವ 35 ಲಕ್ಷಕ್ಕೂ ಮೀರಿದ ಸಂಖ್ಯೆಯಲ್ಲಿರುವ ವಿದ್ಯುತ್ ಬಳಕೆದಾರರಿಗೆ ಅನುಕೂಲವಾಗುತ್ತದೆ.

ಅಲ್ಲದೆ ಸರ್ವ ವಿದ್ಯುತ್ ಗೃಹ ಬಳಕೆದಾರರಿಗೂ ಅನುಕೂಲ ಮಾಡಿಕೊಡಲು ಈ ವರ್ಗದ ವಿದ್ಯುತ್ ಬಳಕೆದಾರರಿಗೆ ವಿಧಿಸಲಾಗಿರುವ ವಿದ್ಯುತ್ ದರಗಳ ಹೆಚ್ಚಳವನ್ನು ಕಡಿಮೆ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಮಾಹೆಯಾನ 200 ಯೂನಿಟ್ಸಿಗಳವರೆಗಿನ ಬಳಕೆಗೆ ಪ್ರತೀ ಯೂನಿಟ್ಸಿಗೆ ರೂ. 1.25 ರಿಂದ ರೂ.1.05, 201 ರಿಂದ 300 ಯೂನಿಟ್ಸುಗಳ ಬಳಕೆಗೆ ರೂ. 2ರಿಂದ ರೂ. 1.60ಕ್ಕೆ ಇಳಿಸಲು ಮತ್ತು 301ರಿಂದ 400 ಯೂನಿಟ್ಸುಗಳ ವಿದ್ಯುತ್ ಬಳಕೆಗೆ ಪ್ರತಿ ಯೂನಿಟ್ಸಿಗೆ ರೂ. 1.80 ಪೈಸೆ ಹಾಗೂ ಮಹೆಯಾನ 400 ಯೂನಿಟ್ಸಿಗಳಿಗೂ ಮೇಲ್ಪಟ್ಟ ವಿದ್ಯುತ್ ಬಳಕೆಗೆ ಪ್ರತಿ ಯೂನಿಟ್ಸಿಗೆ ರೂ. 2.50 ವಿದ್ಯುತ್ ದರವನ್ನು ವಿಧಿಸಲು ಉದ್ದೇಶಿಸಿದೆ.

ಈ ರೀತಿಯ ವಿದ್ಯುತ್ ದರಗಳ ಇಳಿಸುವಿಕೆಯಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಒಂದು ಪೂರ್ಣ ವರ್ಷದಲ್ಲಿ 35 ಕೋಟಿ ರೂ. ಮತ್ತು ಪ್ರಸಕ್ತ ಸಾಲಿನ ಬಾಕಿ ಅವಧಿಗೆ 28 ಕೋಟಿ ರೂ.ಗಳಷ್ಟು ಆದಾಯದಲ್ಲಿ ನಷ್ಟ ಉಂಟಾದರೂ, ಸದರೀ ವರ್ಗಗಳ ಬಳಕೆದಾರರ ಹಿತಾಸಕ್ತಿಗಳನ್ನು ಗಮನಿಸಿ, ಸರ್ಕಾರವು ಈ ನಿರ್ಧಾರವನ್ನು ತೆಗೆದುಕೊಂಡಿದೆ.

ಉಳಿದ ವರ್ಗಗಳ ವಿದ್ಯುತ್ ಬಳಕೆದಾರರಿಗೆ ಈಗಾಗಲೇ ಪ್ರಕಟಿಸಲಾಗಿರುವ ವಿದ್ಯುತ್ ದರಗಳಲ್ಲಿ ಯಾವ ರೀತಿಯ ಬದಲಾವಣೆಯೂ ಇರುವುದಿಲ್ಲ.

ಮೇಲೆ ತಿಳಿಸಿರುವ ವಿದ್ಯುತ್ ದರಗಳ ಇಳಿಸುವಿಕೆಯೂ 1-8-1993ರಿಂದಲೇ ಜಾರಿಗೆ ತರುವುದು.

ಶ್ರೀ ಆರ್.ವಿ. ದೇಶಪಾಂಡೆ:- ನಾನು ತಮ್ಮನ್ನು ಅಭಿನಂದಿಸುತ್ತೇನೆ. ಮುಖ್ಯವಾಗಿ ಕುಡಿಯುವ ನೀರು ಬಿ.ಡಬ್ಲ್ಯು.ಎಸ್.ಎಸ್.ಬಿಯಿಂದ ಮತ್ತು ಮುನಿಸಿಪಾಲಿಟಿಯಿಂದ ಸರಬರಾಜಾಗುತ್ತದೆ. ಆದರೆ ಅಲ್ಲಿ ಅವರಿಗೆ ಹೆಚ್ಚಿನ ದರ ಕೊಡಬೇಕೆಂದು ನಿಗದಿ ಮಾಡಿದ್ದೀರಿ. ಆದರ ಪರಿಣಾಮ ಸಾಮಾನ್ಯ ಕನ್ಸ್ಯೂಮರ್ ಮೇಲಾಗುತ್ತದೆ. ಇದರ ಹೆಚ್ಚಿನ ಹೊರೆಯನ್ನು ಅವರು ಕನ್ಸ್ಯೂಮರ್ ಮೇಲೆ ವರ್ಗಾವಣೆ ಮಾಡಬೇಕಾಗುತ್ತದೆ. ಆದರ ಬಗ್ಗೆ ತಾವು ಕ್ರಮ ತೆಗೆದುಕೊಂಡಿಲ್ಲ. ತಾವು ಆದನ್ನು ಪುನರ್ ಪರಿಶೀಲಿಸಬೇಕಾಗುತ್ತದೆ. ತಾವು ಕಳೆದ ಸದನದಲ್ಲಿ ಒಂದು ಮಾತು ಕೊಟ್ಟಿದ್ದೀರಿ. ಏನೆಂದರೆ ಈ ಮೂರು ತಿಂಗಳ ಡೆಪಾಸಿಟ್ ಏನು ಇದೆ, ಆದರ ಆವರೇಜ್ ತೆಗೆದುಕೊಳ್ಳುತ್ತೇನೆ ಎಂದು. ಆದರೆ ಇವತ್ತು ಆ ಆವರೇಜ್ ತೆಗೆದುಕೊಳ್ಳುತ್ತಿಲ್ಲ. ತಾವು ಆಶ್ವಾಸನೆ ಕೊಟ್ಟರೂ ಕೂಡ ಆ ಆವರೇಜ್ ಪ್ರಕಾರ ತೆಗೆದುಕೊಳ್ಳುತ್ತಿಲ್ಲ. ಮುಂಚೆ ಏನು ಸಿಸ್ಟಂ ಇತ್ತು, ಅತಿ ಹೆಚ್ಚಿನ ಬಿಲ್ಲಿಂಗ್ ಪೀರಿಯಡ್ ಏನು ಇರುತ್ತಿತ್ತು ಆದೇ ಪ್ರಕಾರ ತೆಗೆದುಕೊಳ್ಳುತ್ತಿದ್ದಾರೆ. ಹಾಗಾಗಿ ಕನ್ಸ್ಯೂಮರ್ ಮೇಲೆ ಸಾಕಷ್ಟು ಪರಿಣಾಮವಾಗುತ್ತಿದೆ. ಆದ್ದರಿಂದ ತಾವು ಕೊಟ್ಟ ಭರವಸೆಯನ್ನು ಸಹ ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ :-ಆದನ್ನು ಪರಿಶೀಲಿಸುತ್ತೇನೆ.